ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 90-93
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಅಲಕ್ಷಿತ ಸಮೂಹಗಳ ಕುರಿತು ಶಿವಶರಣರು ಮತ್ತು ದಾಸರ ಚಳವಳಿಗಳು: ಸಮಾಜಶಾಸ್ತ್ರೀಯ ಅವಲೋಕನ

**ಡಾ. ನಿಂಗಪ್ಪ[1] ಮತ್ತು ಡಾ. ಸಂಗನಗೌಡ ಶಿವನಗೌಡ[2]**
[1]ಅತಿಥಿ ಉಪನ್ಯಾಸಕರು. ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿಂಧನೂರು.
[2]ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿಂಧನೂರು.

**Abstract:**
*ಜಾತಿ ಹಣೆಪಟ್ಟಿಯನ್ನು ಕಟ್ಟಿಕೊಂಡು ಬದುಕುತ್ತಿರುವ ಪಟ್ಟಭದ್ರ ಹಿತಾಸಕ್ತಿಗಳನ್ನು ಧಿಕ್ಕರಿಸಿ 12ನೇ ಶತಮಾನದಲ್ಲಿ ಶಿವಶರಣರು ಲೋಕ ಕಲ್ಯಾಣಕ್ಕಾಗಿ ತಮ್ಮ ಜೀವನವೆಲ್ಲ ಮುಡುಪಾಗಿಟ್ಟರು, ಸಾಮಾಜಿಕ ವ್ಯವಸ್ಥೆಯಲ್ಲಿ ಬೇರುಬಿಟ್ಟಿರುವ ಜಾತಿ-ಧರ್ಮದ ಹೆಸರಲ್ಲಿ ನಡೆಯುವ ಗೊಡ್ಡು ಸಂಪ್ರದಾಯಗಳು ಆಚರಣೆಗಳು ಮತ್ತು ದಾಸ್ಯ ವ್ಯವಸ್ಥೆಯ ವಿರುದ್ಧ ತಮ್ಮ ಅನುಭವ ವಾಣಿಯ ಮೂಲಕ ಅರಿವು ಮೂಡಿಸಿದರು. ತದನಂತರ ಪ್ರತಿಯೊಬ್ಬ ಪ್ರಜೆಯೂ ಒಂದಲ್ಲ ಒಂದು ಕಾಯಕ ಮಾಡಿಕೊಂಡು ಜೀವನ ಮಾಡಬೇಕು ಮತ್ತು ಕೊಳ್ಳುಬಾಕತನ ಅನುಸರಿಸದೇ ಜೀವನಕ್ಕೆ ಬೇಕಾಗಿರುವ ಅವಶ್ಯಕ ಸಂಪನ್ಮೂಲವನ್ನು ಮಾತ್ರ ಸಂಗ್ರಹಿಸಿಕೊಂಡು ಬದುಕಬೇಕೆಂದು ಶಿವಶರಣರು ಸಾರಿದರು. ದಾಸರು ಕೂಡ ಮನುಷ್ಯ ಜನ್ಮ ಬರುವುದು ಒಂದೇ ಸಾರಿ ಹಾಳು ಮಾಡಿಕೊಳ್ಳಬೇಡಿ ಹುಚ್ಚಪ್ಪಗಳಿರಾ ಎಂದು ಹೇಳಿದರು. ಮುಂದುವರಿದು ಮಾತಾಪಿತೃರನ್ನು ಬಳಲಿಸಿದಾತನು ಯಾತ್ರೆಗೆ ಹೋದರೆ ಏನು ಫಲ ಎಂದು ಪ್ರಶ್ನಿಸಿ ಜನಸಾಮಾನ್ಯರಿಗೆ ಅರ್ಥವಾಗುವಂತೆ ತಮ್ಮ ಅನುಭವದ ಅಮೃತವನ್ನು ಮನುಕುಲಕ್ಕೆ ಸಾರಿದ್ದಾರೆ.*

**Keywords:** *ಶರಣರು, ದಾಸರು, ಸಾಹಿತ್ಯ, ಮಹಿಳೆ, ಅಲಕ್ಷಿತ ಸಮೂಹ..*

## ಪೀಠಿಕೆ

ಜನಸಾಮಾನ್ಯರಿಗೆ ಅರ್ಥವಾಗುವಂತೆ ಜನರ ನಡುವೆ ವಾಸಿಸಿಕೊಂಡು ದೂರ ದೃಷ್ಟಿಯುಳ್ಳ ವಿಚಾರಗಳನ್ನು ತಮ್ಮ ವಚನಗಳ ಮೂಲಕ ಪ್ರಸಾರ ಕಾರ್ಯ ಮಾಡುತ್ತಾ ಸಾಗಿದ ಶರಣರು ಹಾಗೂ ತಮ್ಮ ಅನುಭವಗಳನ್ನು ಮನಗಂಡ ದಾಸರ ಅನುಭವಗಳು ತತ್ವಪದಗಳಾಗಿ ರೂಪಗೊಂಡಿರುವುದು ಜನಜನಿತವಾಗಿದೆ. ಕರ್ನಾಟಕದಲ್ಲಿ 12ನೇ ಶತಮಾನದಲ್ಲಿ ಸಮ ಸಮಾಜ ಹಾಗೂ ಸರ್ವರ ಏಳಿಗೆಗಾಗಿ ಕಾಯಕದ ಮಹತ್ವ ಹಾಗೂ ಅಂದಕಾರ ನಿವಾರಿಸುವುದು ಆದ್ಯತೆಯ ವಿಚಾರವಾಗಿತ್ತು

> ***ಇವನಾರವ ಇವನಾರವ ಇವನಾರವ ಎಂದೆಣಿಸದಿರಯ್ಯ***
>
> ***ಇವನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯ***

ಎನ್ನುವ ಬಸವಾದಿ ಶರಣರ ವಚನವು ಸಾಮಾಜಿಕ ಸ್ಥರ ವ್ಯವಸ್ಥೆಯಲ್ಲಿ ಇರುವ ಜಾತಿ

***Please cite this article as:*** ನಿಂಗಪ್ಪ ಮತ್ತು ಸಂಗನಗೌಡ ಶಿವನಗೌಡ. (2024). ಅಲಕ್ಷಿತ ಸಮೂಹಗಳ ಕುರಿತು ಶಿವಶರಣರು ಮತ್ತು ದಾಸರ ಚಳವಳಿಗಳು: ಒಂದು ಸಮಾಜಶಾಸ್ತ್ರೀಯ ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 3(3), 90–93

ವ್ಯವಸ್ಥೆಯ ವಿಷ ಬೀಜವನ್ನು ತೊರೆದು ಸಮಸ್ತ ಸಮುದಾಯಗಳು ವಿಶ್ವಪ್ರೇಮ ವಿಶ್ವಭ್ರಾತೃತ್ವ ಸಮಾಜಮುಖಿ ಸೇವೆಯನ್ನು ಹಾಗೂ ಮನುಷ್ಯನನ್ನು ಮನುಷ್ಯತ್ವದಿಂದ ಕಾಣಬೇಕೆ ವಿನಃ ಕೇವಲ ಹುಟ್ಟಿನ ಆಧಾರದಿಂದಲ್ಲ ಎಂಬ ವಚನಗಳ ಸಾಲು ಸಾಮಾಜಿಕ ಮನ್ನಣೆಗೆ ಪಾತ್ರವಾಯಿತು ಆದರೆ ಪ್ರಸ್ತುತ ವ್ಯವಸ್ಥೆಯು ಪಟ್ಟಭದ್ರ ಹಿತಾಸಕ್ತಿಗಳ ಪಾತ್ರಕ್ಕೆ ತಕ್ಕಂತೆ ತಾಳ ಹಾಕುವುದನ್ನು ಕಾಣಬಹುದು

***ಅಪ್ಪನು ನಮ್ಮ ಮಾದಾರ ಚೆನ್ನಯ್ಯ***
***ಬೊಪ್ಪನು ನಮ್ಮ ಡೋಹರ ಕಕ್ಕಯ್ಯ***
***ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ***
***ಚಿಕ್ಕಯ್ಯ ನಮ್ಮಯ್ಯ ಕಾಣಯ್ಯ***

ವಚನಕಾರರ ಉತ್ತುಂಗ ಸ್ಥಾನದಲ್ಲಿರುವ ಅಣ್ಣ ಬಸವಣ್ಣ ಈ ವ್ಯವಸ್ಥೆಯಲ್ಲಿ ಇರುವ ಪ್ರತಿಯೊಬ್ಬ ಮನುಷ್ಯರು ಪರಸ್ಪರಾವಲಂಬನೆಯಿಂದ ಬದುಕು ಸಾಗಿಸಬೇಕು. ಸಮಾಜದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು ಘನತೆ ಗೌರವದಿಂದ ಜೀವಿಸಬೇಕು ಎಂಬುದು ವಚನಕಾರರ ನಿಲುವಾಗಿತ್ತು.

***ಮಡದಿಯ ಪ್ರಾಣಕ್ಕೆ ಮೊಲೆ ಮೂಡಿ ಇದ್ದಿತೇ?***
***ಒಡೆಯರ ಪ್ರಾಣಕ್ಕೆ ಇದ್ದೀತೇ ಯಜ್ಞೋಪವೀತ?***
***ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನ್ನೇ ಪ್ರಾಣದಲ್ಲಿ ಹಿಡಿಗೋಲ?***
***ನೀ ತೊಡಕಿಕ್ಕಿದ ತೊಡಕನೀ ಲೋಕದ***
***ಜಡರತ್ತ ಬಲ್ಲರೈ ರಾಮನಾಥ***

ವ್ಯಕ್ತಿಯ ದೇಹ ರಚನೆಯ ಆಧಾರದ ಮೇಲೆ ಜಗತ್ತು ಹೆಣ್ಣನ್ನು ದ್ವಿತೀಯ ದರ್ಜೆಯವಳು ಎಂದು ಲಿಂಗಾಧಾರಿತ ವಿಂಗಡಣೆ ಎನಿಸುತ್ತದೆ ಯಜ್ಞೋಪವಿತ ಧರಿಸಿದವನು ಬ್ರಾಹ್ಮಣ ಎನಿಸಿಕೊಳ್ಳುತ್ತಾನೆ. ಕೈಯಲ್ಲಿ ಸಂಬಳಗೋಲನ್ನು ತೆಗೆದುಕೊಂಡು ನಡೆದಾಡುವನನ್ನು ಈ ಸಾಮಾಜಿಕ ವ್ಯವಸ್ಥೆಯು ಕೆಲವರ್ಗದವನೆಂದು ಕರೆಯುತ್ತಾರೆ ಆದರೆ ಇವರೆಲ್ಲರಲ್ಲಿ ಇರುವ ಪ್ರಾಣ ಅಥವಾ ಆತ್ಮಕ್ಕೆ ಲಿಂಗಭೇದವಿಲ್ಲ ವರ್ಣಭೇದವಿಲ್ಲ; ಮೇಲು ಕೀಳು ಎನ್ನುವುದು ಇಲ್ಲವೇ ಇಲ್ಲ ಆದುದರಿಂದ ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಶ್ರೇಯೋಭಿವೃದ್ಧಿಗೆ ಸಹಕರಿಸುವುದು ಮತ್ತು ಪ್ರೋತ್ಸಾಹಿಸುವುದು ಅವಶ್ಯಕತೆ ಎಂದು ಶರಣರು ಸಂದೇಶ ಸಾರಿದ್ದಾರೆ

***ಕೊಲ್ಲುವವನೇ ಮಾದಿಗ !***
***ಹೊಲಸು ತಿಂಬವನೇ ಹೊಲೆಯ !***
***ಕುಲವೇನೂ ಆವಂದಿರ ಕುಲವೇನೂ ?***
***ಸಕಲ ಜೀವಾತ್ಮರಿಗೆ ಲೇಸನೆ ಬಯಸುವ***
***ನಮ್ಮ ಕೂಡಲಸಂಗನ ಶರಣರೇ ಕುಲಜರು***

ಸಾಮಾಜಿಕ ವ್ಯವಸ್ಥೆಯಲ್ಲಿ ಬೇರು ಬಿಟ್ಟಿರುವ ಕಂದಾಚಾರ ಡಾಂಬಿಕತೆ ಮೇಲು ಕೀಳು ತಾರತಮ್ಯ ಇತ್ಯಾದಿಗಳನ್ನು ನಿವಾರಿಸುವುದಕ್ಕೆ ಪಣತೊಟ್ಟ ಶರಣರು ಮೇಲ್ಕಂಡಂತೆ ಮನುಷ್ಯನ ಹುಟ್ಟಿನ ಆಧಾರದ ಮೇಲೆ ಜಾತಿಯನ್ನು ನಿರ್ಧರಿಸಲು ಹಾಗೂ ದೂಷಿಸಲು ಸಾಧ್ಯವಿಲ್ಲ ಶರಣರ ಪರಿ ದೃಷ್ಟಿಯಲ್ಲಿ ಕೊಲೆಗಡುಕರೆ ಮಾದಿಗರು ಹೊಲಸು ತಿನ್ನುವವನೇ ಹೊಲೆಯ ಉಳ್ಳವರ ವರ್ಗದಲ್ಲಿ ಈ ರೀತಿಯ ವ್ಯಕ್ತಿಗಳು ಇದ್ದಾರೆ ಆದರೆ ಕುಲವನ್ನು ಆಧಾರವಾಗಿಟ್ಟುಕೊಂಡು ನಿಂದಿಸುವ ಜನರಿಗೆ ಮೇಲಿನಂತೆ ಪ್ರಶ್ನಿಸಿದ್ದಾರೆ.

ಬಸವಣ್ಣ ದೇವರ ದಾಸಿಮಯ್ಯರಂತೆ ಅಲ್ಲಮಪ್ರಭು ಡೋಹರ ಕಕ್ಕಯ್ಯ ಆಯ್ದಕ್ಕಿ ಮಾರಯ್ಯ ಕೇತಯ್ಯ ಮುಂತಾದ ತಳವರ್ಗದ ಶರಣರು ಸಮಾಜದಲ್ಲಿ ಡಾಂಬಿಕತೆ ವರ್ಣ ವ್ಯವಸ್ಥೆ ದೇವರು ಮೇಲ್ವರ್ಗದವರ ನಡೆ–ನುಡಿ ಮುಂತಾದವುಗಳ ಕುರಿತು ತಮ್ಮ ವಚನಗಳ ಮಾತಿನ ಮೂಲಕ ಅಭಿವ್ಯಕ್ತಪಡಿಸಿದ್ದಾರೆ

***"ಹೆದರದಿರು ಮನವೇ ಬೆದರದಿರು ಮನವೆ !***
***ನಿಜವರಿತು ನಿಶ್ಚಿಂತವಾಗಿರು***
***ಫಲವಾದ ಮರನ ಇಡುವುದೊಂದೇ ಕೋಟಿ !***
***ಎಲರದ ಮರನ ಇಡುವರೂಬ್ಬರ ಕಾಣೆ***
***ಭಕ್ತಿಯುಳ್ಳವರ ಬೈವರೊಂದು ಕೋಟಿ***

***ಭಕ್ತಿಯಿಲ್ಲದವರ ಬೈವರೊಬ್ಬರ ಕಾಣೆ !***
***ನಿಮ್ಮ ಶರಣರ ನುಡಿಯೆ ಎನಗೆ ಗತಿಸೋಪಾನ***
***ಚೆನ್ನಮಲ್ಲಿಕಾರ್ಜುನ "***

ಸಮಾಜದಲ್ಲಿ ಪುರುಷನ ಸ್ವತ್ತಾಗಿರುವ ಎಲ್ಲಾ ನಿರ್ಧಾರಗಳಿಂದ ಮಹಿಳೆಯು ಅಲಕ್ಷತತೆಗೆ ಒಳಗಾಗಿರುವುದನ್ನು ಅಕ್ಕಮಹಾದೇವಿಯವರ ವಿಡಂಬನೆ ಸೂಕ್ತವಾಗಿದೆ. ಹೆಣ್ಣನ್ನು ಮಾಯೆ ಎಂದು ಹೀನಾಯವಾಗಿ ಕಾಣುವ ಈ ಪುರುಷಪ್ರಧಾನ ಸಮಾಜವನ್ನು ಪ್ರಶ್ನಿಸಿರುವ ಅಕ್ಕ, ಹೆಣ್ಣು ಸತ್ವಪೂರ್ಣ ಧೈರ್ಯಶಾಲಿ ವ್ಯಕ್ತಿತ್ವದ ಧೂತಕವೆಂದು ವಿವರಿಸಿದ್ದಾರೆ.

***"ಹೊಲೆಯ ಬಂದನೆಂದು ಒಳಗೆ ದೇವರ ಮಾಡಿ***
***ಗಣ ಗಣ ಗಂಟೆಯ ಬಾರಿಸುವಿರಯ್ಯ***
***ತನುವಿನ ಕೋಪವು ಹೊಲೆಯಲ್ಲವೇ***
***ಪರಧನ ಪರಸತಿ ಹೊಲೆಯಲ್ಲವೇ***
***ಹೊರಗಿದ್ದ ಹೊಲೆಯನೇ ಒಳಗೆ ಬಚ್ಚಿಟ್ಟರೇ***
***ಇದಕ್ಕೇನು ಮದ್ದೋ ಪುರಂದರ ವಿಠಲಾ!!'***

ಸಾಹಿತ್ಯದಲ್ಲಿ ದಾಸರ ಕೀರ್ತನೆಗಳು ಅದರದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಜಾತಿಯ ಹೆಸರಿನಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿ ಆಚರಿಸುವ ಸಂಪ್ರದಾಯಗಳನ್ನು ತೀವ್ರವಾಗಿ ಖಂಡಿಸುವುದನ್ನು ಕೀರ್ತನೆಗಳಲ್ಲಿ ಕಾಣಬಹುದಾಗಿದೆ.

***"ಕುಲ ಕುಲವೆನ್ನುತಿಹರೋ***
***ಕುಲವಾವುದು ಸತ್ಯ ಸುಜನರಿಗೆ !***
***ಕೆಸರೊಳು ತಾವರೆ ಪುಟ್ಟಲು ಅದು ತಂದು***
***ಕುಸುಮನಾಭನಿಗೆ ಅರ್ಪಿಸಿರೇನಯ್ಯ?***
***ಹಸುವಿನ ಮಾಂಸದೋಳುತ್ಪತ್ತಿ ಕ್ಷೀರವ***
***ವಸೂದೆಯೊಳಗೆ ಭೂಸುರರುಣವರೇನಯ್ಯ ? "***

ಸಾಮಾಜಿಕ ವ್ಯವಸ್ಥೆಯಲ್ಲಿನ ಜಾತಿ ವ್ಯವಸ್ಥೆಯನ್ನು ಪೋಷಿಸಿಕೊಂಡು ಬರುವ ಪಟ್ಟಭದ್ರ ಹಿತಾಸಕ್ತಿಗಳನ್ನು ಕುರಿತು ಕನಕದಾಸರು ತಮ್ಮ ಕೀರ್ತನೆಯಲ್ಲಿ ತೀವ್ರವಾಗಿ ಖಂಡಿಸಿದ್ದಾರೆ ಇನ್ನೊಂದು ಕೀರ್ತನೆಯಲ್ಲಿ ಕುಲಕುಲವೆಂದು ಬಡಿದಾಡುವವರಿಗೆ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ ಎಂದು ಪ್ರಶ್ನಿಸಿದ್ದಾರೆ ಮತ್ತು ಸವಾಲನ್ನು ಹಾಕಿದ್ದಾರೆ.

***ನಾವು ಕುರುಬರು ನಮ್ಮ ದೇವರು ಬೀರಯ್ಯ***
***ಕಾವ ನಮ್ಮಜ್ಜ ನರಕುರಿಗಳ ಹಿಂದುಗಳ***
***ಅಷ್ಟ ಮದ ಮತ್ಸರಗಳೆಂಬ ಟಗರುಗಳು***
***ದೃಷ್ಟಿ ಜೀವಾತ್ಮನೆಂಬೊ ಆಡು***
***ಸೃಷ್ಟಿ ಪ್ರಸಿದ್ಧವಂತೆಂಬುವಾ ಹೊತುಗಳು***
***ಕಟ್ಟೆ ಕೋಲಿನಲಿ ಇರುತಿರುವ ನಮ್ಮಜ್ಜ !!***

ಸಮಾಜದಲ್ಲಿ ಜಾತಿಯ ಹೆಸರಲ್ಲಿ ನಿಂದಿಸುವ ಮತ್ತು ಹಂಗಿಸುವವರಿಗೆ ಕನಕದಾಸರು ಆತ್ಮಪ್ರತ್ಯಾಯದಿಂದಲೇ ಹೌದು ನಾವು ಕುರುಬರು ಎಂದು ಉತ್ತರವನ್ನು ನೀಡಿದ್ದಾರೆ. ವಿಶೇಷವೇನೆಂದರೆ ನಮ್ಮಜ್ಜಯೆಂದರೆ ಜಗತ್ತನ್ನು ಕಾಪಾಡುವ ಭಗವಂತ ಎಂದರ್ಥ ಆ ಅಜ್ಜನ ಮೊಮ್ಮಗನಾದ ಮೇಲೆ ತಾನು ಕುರುಬನೇ ಎಂದ ಹಾಗಿತ್ತಲ್ಲ? ಎಂದಿದ್ದಾರೆ.

**ಸಮಾರೋಪ**

ಹೀಗೆ ಶಿವಶರಣರು ಹಾಗೂ ದಾಸರು ತಮ್ಮ ವಚನಗಳು ಮತ್ತು ಕೀರ್ತನೆಗಳಲ್ಲಿ ಸಾಮಾಜಿಕ ಸತ್ಯ ಸಂಗತಿಗಳನ್ನು ಸೂಕ್ಷ್ಮವಾಗಿ ವಿವರಿಸಿದ್ದಾರೆ. ಸಮಾಜದಲ್ಲಿ ಬದುಕಿನ ಮೌಲ್ಯಗಳನ್ನು ಹಿಡಿಯುವ ವ್ಯಕ್ತಿಗತ ಬದುಕನ್ನು ಶುದ್ಧೀಕರಿಸಿಕೊಳ್ಳುವ ಮಾನವರೆಲ್ಲರೂ ಸುಸ್ಥಿರ ಮನೋಭಾವನೆಯಿಂದ ಬದುಕನ್ನು ಕಟ್ಟಿಕೊಳ್ಳುವ ಬದುಕನ್ನು ಮುನ್ನಡೆಸುವಂತೆ ಶರಣರು ಹಾಗೂ ದಾಸರು ಮುನ್ನುಡಿಯಾಗಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಬಸವರಾಜು ಎಲ್. (2008). *ಅಲ್ಲಮನ ವಚನಗಳು.* ಗೀತಾ ಬುಕ್‌ಹೌಸ್.
- ಚಿದಾನಂದಮೂರ್ತಿ, ಎಂ. (1998). *ವಚನ ಸಾಹಿತ್ಯ ಜನಪ್ರಿಯ ಸಾಹಿತ್ಯ ಚರಿತ್ರೆ.* ಬೆಂಗಳೂರು ವಿಶ್ವವಿದ್ಯಾಲಯ

- ಜವರಯ್ಯ. (1999). *ವಚನ ವಾಹಿನಿ.* ವೀರಶೈವ ಅಧ್ಯಯನ ಸಂಸ್ಥೆ.
- ರಾಮಚಂದ್ರರಾವ್. (2002). *ದಾಸ ಸಾಹಿತ್ಯ ಮತ್ತು ಸಂಸ್ಕೃತಿ.* ಕನ್ನಡ ಪುಸ್ತಕ ಪ್ರಾಧಿಕಾರ.
- ವಿದ್ಯಾಶಂಕರ. (2001). *ವಚನಗಳು.* ಕರ್ನಾಟಕ ಸಾಹಿತ್ಯ ಅಕಾಡೆಮಿ.